40th Year of Publication. Phone: 3728.

ವಾರ್ಷಿಕ ಚಂದಾ ರೂ. 12—50.

ಪ್ರಭಾತ

ಬೆಲೆ 20 ಪೈಸೆ.

ಸಂಪುಟ: ೪೦. ಸಂಚಿಕೆ: ೪೫. | ಸಂಪಾದಕ: ಕುಡ್ವಿ ವಾಸುದೇವ ಶೆಣೈ. ರವಿವಾರ ತಾ. 15—12—1974 | VOL. 40. No. 45.

ರೋಟರಿ ಕ್ಲಬ್ಬಿನಲ್ಲಿ ಶ್ರೀ| ಪಿ. ಡಿ. ಶೆಣೈ

"ಮುಂದಿನ ಹತ್ತು ವರ್ಷಗಳೊಳಗೆ ಚಲಚ್ಚಿತ್ರವು ಕ್ರಾಂತಿಕಾರಕ ಬದಲಾವಣೆ ಹೊಂದಲಿದೆ. ಅದು ಕೇವಲ ಚಲಚ್ಚಿತ್ರವಾಗಿ ಉಳಿಯದೆ ಟೆಲಿವಿಜನ್‌ನೊಂದಿಗೆ ಸಂಯೋಜನೆ ಹೊಂದಿ, ಪ್ರಸ್ತುತದ ಕಳಪೆ ಚಿತ್ರಗಳ ಬದಲು ಕಲೆ ಸಾಹಿತ್ಯಗಳನ್ನೊಳಗೊಂಡ ಶ್ರೇಷ್ಠ ಮಟ್ಟದ ಚಿತ್ರಗಳು ಹೊರಬರಲಿವೆ. ಈ ದಿಶೆಯಲ್ಲಿ ಚಿತ್ರ ನೋಡುವ ಸಮಾಜ ಜೀವಿಗಳ ಮನೋವಿಕಾಸವಾಗಿ ನೈತಿಕ ಮಟ್ಟ ಉನ್ನತಿಗೇರಬೇಕು" ಎಂಬುದಾಗಿ ಚಲಚಿತ್ರ ನಿರ್ದೇಶಕ ಶ್ರೀ| ಪಿ. ಡಿ. ಶೆಣೈ ಅವರು ಮುಖ್ಯ ಅತಿಥಿಯಾಗಿ ಮಂಗಳೂರು ರೋಟರಿ ಕ್ಲಬ್ಬಿನ ತಾ. 12ರ ಸಾಪ್ತಾಹಿಕ ಸಭೆಯಲ್ಲಿ ಭಾಷಣ ಮಾಡುತ್ತ ಹೇಳಿದರು. ರೋ| ಡಾ| ಪ್ರಭಾಕರ ರಾಯರ ಅಧ್ಯಕ್ಷತೆಯಲ್ಲಿ ನಡೆದ ಈ ಸಭೆಯಲ್ಲಿ ಮುಖ್ಯ ಅತಿಥಿಗಳ ಪರಿಚಯವನ್ನು ಡಾ| ಸಿ. ವಿ. ಕಾಮತರು ಮಾಡಿಕೊಟ್ಟಿದ್ದರು.

ಗೇಣಿದಾರರಿಗೆ ಎಲ್ಲ ನೆರವು

"ಗೇಣಿದಾರರಿಗೆ ಭೂಮಿಯ ಒಡೆತನ ದೊರಕಿದರಷ್ಟೆ ಅವರ ಪರಿಸ್ಥಿತಿ ಸುಧಾರಿಸುವುದಿಲ್ಲ. ಕೃಷಿಗೆ ಅಗತ್ಯವಿರುವ ಎಲ್ಲ ನೆರವನ್ನೂ ಅವರಿಗೊದಗಿಸಲು ಯೋಚಿಸಿದ್ದೇವೆ. ಈ ನೆರವನ್ನು ಯೋಗ್ಯರೀತಿಯಲ್ಲಿ ಬಳಸಿಕೊಂಡು ಉತ್ಪತ್ತಿ ಹೆಚ್ಚಿಸಿ ದೇಶದ ಮತ್ತು ತಮ್ಮ ಅಭಿವೃದ್ಧಿಗೆ ಅವರು ಮನಃಪೂರ್ವಕ ಯತ್ನಿಸಬೇಕು. ಹಾಗೆಯೇ ಭೂ ಶಾಸನ ಜಾರಿಗೆ ತರುವಲ್ಲಿ ಸರಕಾರಿ ಅಧಿಕಾರಿಗಳೂ ಸರಕಾರದ ಉದ್ದೇಶವನ್ನು ಮನವರಿಕೆ ಮಾಡಿಕೊಂಡು ನಿಷ್ಠೆಯಿಂದ ಕಾರ್ಯ ಪ್ರವೃತ್ತರಾಗಬೇಕು" ಎಂಬುದಾಗಿ ಕುಪ್ಪೆಪದವಿನಲ್ಲಿ ತಾ. 11ರಂದು ರೈತ ಸಮ್ಮೇಳನವನ್ನು ಉದ್ಘಾಟಿಸಿ ಮಾಡಿದ ಭಾಷಣದಲ್ಲಿ ಕರ್ನಾಟಕ ಮುಖ್ಯ ಮಂತ್ರಿಗಳು ಹೇಳಿದರು.

ಸುರತ್ಕಲ್ — ಗುರುಪುರ ಮಂಡಲ ಕೊಂಗ್ರೆಸ್ ಸಮಿತಿಯ ಆಶ್ರಯದಲ್ಲಿ ಕುಪ್ಪೆಪದವು ಕೊಂಗ್ರೆಸ್ ಉಪಸಮಿತಿಯು ಈ ಬೃಹತ್ ರೈತ ಸಮ್ಮೇಳನ ನಿಯೋಜಿಸಿತು. ಭೂ ಸುಧಾರಣಾ ಖಾತೆಯ ಸಚಿವ ಶ್ರೀ| ಸುಬ್ಬಯ್ಯ ಶೆಟ್ಟಿಯವರು ಅಧ್ಯಕ್ಷತೆ ವಹಿಸಿದ್ದರು.

ಕೊಂಗ್ರೆಸಿಗರಿಗೆ ಶ್ರೀ| ಅರಸರ ಹಿತನುಡಿ

"ಕೊಂಗ್ರೆಸ್ ಪಕ್ಷವನ್ನು ಸಮರ್ಥವಾಗಿ, ಸುಭದ್ರವಾಗಿ ಬೆಳೆಸಲು ತಾತ್ವಿಕವಾದ ತೀರ್ಮಾನಗಳನ್ನು ಕೈಗೊಳ್ಳುವಲ್ಲಿ ಪಕ್ಷದ ಆರ್ಥಿಕನೀತಿ ಕಾರ್ಯಕ್ರಮದ ವಿಚಾರದ ಮೇಲೆ ಸುದೃಢ ನಂಬಿಕೆಗಳು ರಕ್ತಗತವಾಗಿ ಬಂದಲ್ಲಿ ಮಾತ್ರ ಅವರು ಪಕ್ಷದ ಸದಸ್ಯರಾಗಲು ಸಮರ್ಥರಾಗುತ್ತಾರೆ. ಬುಡಭದ್ರವಿಲ್ಲದ ಯಾವುದೇ ಪಕ್ಷಗಳು ಒಳ್ಳೆಯ ಪಕ್ಷಗಳಾಗಲು ಸಾಧ್ಯವಿಲ್ಲ. ಈ ನಿಟ್ಟಿನಲ್ಲಿ ಕಾಯಾ, ವಾಚಾ, ಮನಸಾ ರಾಷ್ಟ್ರ ನಿರ್ಮಾಣಕ್ಕೆ ಪಕ್ಷದ ನಂಬಿಕೆ ವಿಶ್ವಾಸಗಳನ್ನು ರಕ್ತಗತವಾಗಿಸಿಕೊಂಡು ಬರಬೇಕು" ಎಂಬುದಾಗಿ ಕರ್ನಾಟಕದ ಮುಖ್ಯ ಮಂತ್ರಿ ಶ್ರೀ| ಡಿ. ದೇವರಾಜ್ ಅರಸ್ ತಾ. 10ರಂದು ಮಂಗಳೂರಲ್ಲಿ ಕೊಂಗ್ರೆಸಿಗರಿಗೆ ಕರೆನೀಡಿದರು. ಬಾವಟೆ ಗುಡ್ಡದ ಕಾರ್ನಾಡ್ ಸದಾಶಿವ ರಾವ್ ಸ್ಮಾರಕ ಭವನದಲ್ಲಿ ಶ್ರೀ| ಕೆ. ಕೆ. ಶೆಟ್ಟಿ ಎಂ. ಪಿ. ಅವರ ಅಧ್ಯಕ್ಷತೆಯಲ್ಲಿ ಸೇರಿದ ಕೊಂಗ್ರೆಸ್ ಕಾರ್ಯಕರ್ತರು, ಪುರಸಭಾ ಸದಸ್ಯರು ತಾಲೂಕು ಮಂಡಳಿ ಸದಸ್ಯರುಗಳ ಸಭೆಯನ್ನುದ್ದೇಶಿಸಿ ಅವರು ಮಾತನಾಡುತ್ತಿದ್ದರು.

— —

ಏಕ ಗಂಟೆನಲ್ಲಿ ಪರಿಹಾರ

ವಿಧವೆಯರಿಗೆ ಮತ್ತು ಅಂಗವಿಕಲರಿಗೆ ಭೂ ಶಾಸನ ಕಾಯಿದೆಯನ್ವಯ ಸಂಕಷ್ಟವೊದಗಿರುವ ವಿಚಾರ ಸರಕಾರದ ಗಮನಕ್ಕೆ ಬಂದಿದೆ; ಭೂ ಶಾಸನಕ್ಕೆ ಸಂಬಂಧಿಸಿದ ಪ್ರಕರಣಗಳ ಇತ್ಯರ್ಥಕ್ಕೆ ಟ್ರೈಬ್ಯೂನಲ್ ಜಾರಿಗೆ ಬಂದಿದ್ದು, ಈ ಮೂಲಕ ನಷ್ಟಕ್ಕೀಡಾಗುವ ವಿಧವೆಯರಿಗಾಗಲಿ ಭೂಮಾಲಿಕರಿಗೇ ಆಗಲಿ ಪರಿಹಾರವನ್ನು ಏಕಗಂಟೆನಲ್ಲಿ ನೀಡುವರೆ ಸರಕಾರದೊಡನೆ ವ್ಯವಹರಿಸಿ ಇತ್ಯರ್ಥಗೊಳಿಸುವ ಆಸಕ್ತಿ ತನಗಿದೆಯೆಂದು ಕರ್ನಾಟಕದ ವಿಶೇಷ ಭೂ ಶಾಸನ ಖಾತೆಯ ಸಹಾಯಕ ಸಚಿವ ಶ್ರೀ| ಸುಬ್ಬಯ್ಯ ಶೆಟ್ಟಿ ಅವರು ಸುರತ್ಕಲ್ ಪಂಚಾಯತ್ ಕಚೇರಿ ಆವರಣದಲ್ಲಿ ಜರಗಿದ ಸಾರ್ವಜನಿಕ ಸಭೆಯನ್ನುದ್ದೇಶಿಸಿ ಮಾತನಾಡುವಾಗ ತಿಳಿಸಿರುವರು.

"ಟ್ರೆಫಿಕ್ ವೀಕ್"

ದಶಂಬರ್ ತಾ. 16ರಿಂದ 22ರ ತನಕ ಮಂಗಳೂರಲ್ಲಿ ವಾಹನ ಸಂಚಾರ ಸಪ್ತಾಹವು ಆಚರಿಸಲ್ಪಡುವುದು. ಈ ಕಾರ್ಯಕ್ರಮದಲ್ಲಿ ಸಾರ್ವಜನಿಕರು ಪೋಲೀಸರೊಂದಿಗೆ ಸಹಕರಿಸುವಂತೆ ವಿನಂತಿಸಲಾಗಿದೆ.

— —

ಸಮಾಜ ಸುಧಾರಕ ಸರ್ವಜ್ಞ

(ಸರ್ವಜ್ಞಕವಿಯ ಚತುರ್ಥ ಶತಮಾನೋತ್ಸವ ಸಂದರ್ಭದಲ್ಲಿ
'ಕನ್ನಡನುಡಿ'ಯ ವಿಶೇಷ ಲೇಖನ.)

(ರಾಧಾಧವ)

(ತಾ. 1-12-'74ನೇ ಸಂಚಿಕೆಯಿಂದ ಮುಂದುವರಿದುದು)

ಜೀವನಚರಿತ್ರೆ

ಧಾರವಾಡ ಜಿಲ್ಲೆಯ ಮಾಸೂರು ಗ್ರಾಮದ ಬಸವರಸನೆಂಬ ಆರಾಧ್ಯ ಬ್ರಾಹ್ಮಣ ತನ್ನ ಪತ್ನಿ ಮಲ್ಲಮ್ಮ ಮಕ್ಕಳಿಲ್ಲವೆಂದು ದುಃಖಿಸುತ್ತಿರಲು ಪುತ್ರಾಕಾಂಕ್ಷಿಯಾಗಿ ಕಾಶಿಯ ಮುಕ್ಕಣ್ಣನ ಸನ್ನಿಧಿಯಲ್ಲಿ ತಪಗೈದು ವರ ಪಡೆದು ಸಂತೋಷದಿಂದ ಊರಿಗೆ ಹಿಂತಿರುಗುತ್ತಿದ್ದನು. ದಾರಿಯಲ್ಲಿ ಅಂಬಲೂರಿಗೆ ಬಂದು ತನ್ನ ಕಾಲಕರ್ಮವಶಾತ್ ಕುಂಬಾರ ಮಾಳಿಯೆಂಬವಳನ್ನು ಕಂಡು, ಅವಳಲ್ಲಿ ಗರ್ಭಾದಾನ ಮಾಡಿ ಊರಿಗೆ ಹೊರಟುಹೋದ. ಈ ಕುಂಬಾರ ಮಾಳಿಯಲ್ಲಿಯೇ ಸರ್ವಜ್ಞ ಉದಿಸಿದ. ಕುಂಬಾರಸಾಲೆಯಲ್ಲಿ ಜನಿಸಿದ ಕಾರಣ ಸಾಲೆಯ ಸರ್ವಜ್ಞನೆಂಬ ಹೆಸರು ಬಂದಿತು. ಆತನೇ ಹೇಳಿದ ಕೆಳಗಿನ ವಚನಗಳು ಆತನ ವೃತ್ತಾಂತಕ್ಕೆ ಪುಷ್ಟಿ ನೀಡುತ್ತವೆ.

ಮಾಸೂರ ಬಸವರಸ ಕೂಸನೀಶನ ಕೇಳೆ ।
ಕಾಶಿಯ ಅಭವನೊಳು ಪಡೆದ ವರವದುವೆ ।
ಸೂಸಿತೆಂತೆನಲು ಸರ್ವಜ್ಞ ॥

ಅಂಬಲೂರೊಳಗೆಸೆವ ಕುಂಬಾರಸಾಲೆಯಲಿ ।
ಇಂಬಿನ ಕಳೆಯ ಮಾಳಿಯೊಳು ಬಸವರಸ ।
ನಿಂಬಿಟ್ಟನೆನ್ನ ಸರ್ವಜ್ಞ ॥

ಆದರೂ ಮಾಳವ್ವ ಆತನನ್ನು ಸರಿಯಾಗಿ ಪಾಲಿಸಲಿಲ್ಲವೆಂದು ತಿಳಿಯುತ್ತದೆ.

ಹೆತ್ತವಳು ಮಾಳಿಯೆನ್ನೊತ್ತಿ ತೆಗೆದವಳು ಬೆ ।
ನ್ನೊತ್ತಿ ಹಿಡಿದವಳು ಕಾಳಿ ತಾ ಮೊರದೊಳಗೆ ।
ಬಿತ್ತರಿಸಿದವನು ಸರ್ವಜ್ಞ ॥

ನೂಕಿದರು ಅವರಾಗ ಕೂಕತನದೊಳು ಬೇಗ ।
ಲೋಕದೊಳಗೆಲ್ಲ ಕಂಡುದನು ನುಡಿದು ತಾ ।
ನೇಕವಾಗಿಹನು ಸರ್ವಜ್ಞ ॥

ಚಿಕ್ಕ ವಯಸ್ಸಿನಲ್ಲಿಯೇ ಹಿಂಡನಗಲಿದ ಗಜದಂತೆ ದೇಶಾಂತರ ಹೊರಟು ಅನುಭವದ ಸಾರವಾಗಿ ಇಡೀ ಕರ್ನಾಟಕವನ್ನೆಲ್ಲ ಸಂಚರಿಸಿದನು.

ಕ್ರಾಂತಿಕಾರಿ

ಸರ್ವಜ್ಞ ಸಮಾಜ ಸುಧಾರಣೆಯಲ್ಲಿ ಕ್ರಾಂತಿಕಾರ ವಚನಕಾರರ ಗುಂಪಿಗೆ ಸೇರಿದವನು. ಬಸವಣ್ಣ, ಅಲ್ಲಮಪ್ರಭು, ಚನ್ನಬಸವಣ್ಣ, ಅಕ್ಕಮಹಾದೇವಿ ಮೊದಲಾದ ಶಿವಶರಣ-ಶರಣೆಯರು ಸಮಾಜದಲ್ಲಿಯ ಲೋಪದೋಷಗಳನ್ನೆತ್ತಿ ತೋರಿಸಿ, ಬಾಹ್ಯಾಡಂಬರವನ್ನು ಬಿಟ್ಟು ಅಂತಃಶುದ್ಧಿಗೈದು ತನುವ ಸಂತೈಸಿಕೊಳ್ಳಲು ಜನತೆಗೆ ತಮ್ಮ ವಚನಗಳ ಮುಖಾಂತರ ಕರೆ ಇತ್ತರು. ಅಸ್ಪೃಶ್ಯತೆಯ ನೀತಿಯನ್ನು ಟೀಕಿಸಿ ಸಮಾಜದಲ್ಲಿ ದೊಡ್ಡ ಗೊಂದಲವನ್ನೆಬ್ಬಿಸಿದರು. ಆ ಕಾಲದಲ್ಲಿ ಇದರಿಂದ ಮಹಾ ಕೋಲಾಹಲವಾಯಿತು. ಆದರೆ ಅವರು ಇಷ್ಟಕ್ಕೇ ಬಿಡಲಿಲ್ಲ. ನುಡಿದಂತೆ ನಡೆಯಬೇಕೆಂದು ತಿಳಿದು ಹರಳಯ್ಯ ಮಧುವಯ್ಯರ ಮಕ್ಕಳಲ್ಲಿ ವೈವಾಹಿಕ ಸಂಬಂಧವನ್ನು ನಡೆಸಿದರು. ಶಿವಶರಣರ ವಚನಗಳಿಂದ ಪ್ರಭಾವಿತನಾಗಿದ್ದ ಸರ್ವಜ್ಞ ತನ್ನದೇ ಆದ ತ್ರಿಪದಿಯಲ್ಲಿ ಜನರಲ್ಲಿ ಕಂಡುಬರುವ ಮೋಸ, ವಂಚನೆ, ಅನ್ಯಾಯ, ಮೂಢನಂಬಿಕೆ, ಅಂಧಶ್ರದ್ಧೆಗಳನ್ನು ಮಾರ್ಮಿಕವಾಗಿ ಟೀಕಿಸಿ ಉತ್ತಮರನ್ನಾಗಿ ಮಾಡಲು ಹೆಣಗಿದ.

"ನಸ್ತ್ರೀ ಸ್ವಾತಂತ್ರ್ಯಮರ್ಹತಿ" ಎಂದು ಸಾರಿ ಸ್ತ್ರೀಯನ್ನು ಸಂಪೂರ್ಣವಾಗಿ ಮನೆಯ ಹೊಸತಿಲಲ್ಲಿಯೇ ಇರಿಸಿ ಅವಳಿಗೆ ಯಾವದೊಂದು ಸ್ವಾತಂತ್ರ್ಯವನ್ನೂ ಕೊಡದೆ, ಅವಳಿಗೆ ವೇದಾಧ್ಯಯನದ ಹಕ್ಕು ಇಲ್ಲವೆಂದು ವಾದಿಸುವವರಿಗೆ ಸರ್ವಜ್ಞನು,

ಪಲ್ಲಕ್ಕಿ ಏರಿದವರೆಲ್ಲಿಂದ ಬಂದಿಹರು ।
ನೆಲ್ಲಕ್ಕಿಯಂತೆ ಸುಲಿದಿಲ್ಲ ಹಿರಿಯರು ।
ನಲ್ಲಳಿಂದಲ್ಲೆ ಸರ್ವಜ್ಞ ।

ಮಾಯೆ ಗೆದ್ದಿಹ ಸೊಲ್ಲು ಬಾಯಿ ಮಾತಲ್ಲವೆ ।
ಮಾಯೆಯಿಂ ಕಾಯವಾಗಿರಲು ಇವರುಗಳು ।
ಮಾಯೆ ಗೆಲಲುಂಟೆ ಸರ್ವಜ್ಞ ॥

ಹೀಗೆ ಸರ್ವಜ್ಞನು ನಗೆ, ಹಾಸ್ಯಗಳಿಂದಲೇ ಜನರ ತಪ್ಪು ತಡೆಗಳನ್ನೂ ಖಂಡಿಸಿ ಅವರೆಲ್ಲ ತನ್ನ ಸುತ್ತು ಸೇರುವಂತೆ ಮಾಡುತ್ತಿದ್ದ ಆಡು ಮುಟ್ಟದ ಗಿಡವಿಲ್ಲವೆಂಬಂತೆ ಸರ್ವಜ್ಞನು ಹೇಳದೇ ಬಿಟ್ಟ ವಿಷಯಗಳಿಲ್ಲವೆನ್ನಬಹುದು. ಆಧ್ಯಾತ್ಮಿಕ, ಸಾಮಾಜಿಕ, ವ್ಯಾವಹಾರಿಕ ಪದ್ಧತಿಗಳಲ್ಲಿ ಚೆನ್ನಾಗಿ ತಿಳಿಹೇಳಿದುದಲ್ಲದೆ ಸ್ತ್ರೀ, ಸತ್ಯ, ಒತ್ತಾಯ ಶಿಕ್ಷಣ, ರಾಷ್ಟ್ರೀಯ ವಿಚಾರ, ದುರಾಚಾರ, ದುಷ್ಟ ವ್ಯಸನಗಳ ಬಗೆಗೆ ಸಾಕಷ್ಟು ಹೇಳಿದ್ದಾನೆ. ಇದರಿಂದ ಸರ್ವಜ್ಞನೊಬ್ಬ ಸಮಾಜಸುಧಾರಕನೇ ಸೈ! ಇಂದಿನ ನಾಯಕರು ಹೇಳುತ್ತಿರುವ ಸಮಾಜವಾದಿ ನೀತಿಯನ್ನು ಸರ್ವಜ್ಞನು ಆ ಕಾಲದಲ್ಲಿಯೆ ಪ್ರಚಾರ ಮಾಡಿ ರಾಮರಾಜ್ಯದ ಸ್ಥಾಪನೆಗೆ ತಳಪಾಯ ಹಾಕಿದ್ದನೆಂಬುದು ನೂರಕ್ಕೆ ನೂರರಷ್ಟು ಸತ್ಯ! ಈಗ ಆತನ ನಾಲ್ಕುನೂರನೆಯ ಉತ್ಸವವನ್ನು ಆಚರಿಸಲು ನಿರ್ಧರಿಸಿ ಆತನ ವಚನಗಳ ಸವಿಯನ್ನು ಸವಿಯಲು, ಕನ್ನಡ ಕುಲಕೋಟಿ ಸಿದ್ಧವಾದುದು ಆತನಿಗೆ ಸಂದ ಗೌರವವೆಂದು ಭಾವಿಸಬೇಕು. ಜಾನಪದ ಗೀತೆಯ ಹಿರಿಯ ಕವಿಯಾಗಿ, ಶ್ರೇಷ್ಠ ದಾರ್ಶನಿಕನಾಗಿ, ಅನುಭವದ ಗಣಿಯಾಗಿ, ಮೂರ್ತಿಮಂತ ತೇಜೋವಂತನಾದ ಸರ್ವಜ್ಞನನ್ನು ಸ್ಮರಿಸಿ, ಆತನು ಸಮಾಜ ಸುಧಾರಣೆಯಲ್ಲಿ ಅಭಿನಯಿಸಿದ ಪಾತ್ರವಾವುದೆಂಬುದನ್ನು ಅರಿತುಕೊಳ್ಳೋಣ.

ಕೃಷಿ

ಕರ್ನಾಟಕ, ಕರಿಯ ಶ್ರೇಷ್ಠ ನೆಲದಿಂದೊಡಗೂಡಿ ಸಮೃದ್ಧ ಬೆಳೆಯನ್ನು ಸುರಿಸುವ ನಾಡು! ಕೃಷ್ಣೆ ತುಂಗೆ ಕಾವೇರಿಯರ ಪಾವನ ಜಲದಿಂದ ತಣಿದು ಸುವರ್ಣವೃಷ್ಟಿಯನ್ನೇ ಸುರಿಸುವ ನಾಡು! ಇಲ್ಲಿಯ ನಾಡವರು ಕೃಷಿಯನ್ನೇ ಮುಖ್ಯ ಉದ್ಯೋಗವನ್ನಾಗಿ ಕೈಕೊಂಡು ಜಗತ್ತಿಗೇ ಅನ್ನದಾತರೆಂದು ಹೆಸರಾದವರು.

ಕೃಷಿ ಪ್ರಥಮ, ವ್ಯಾಪಾರ ಮಧ್ಯಮ, ನೌಕರಿ ಕನಿಷ್ಠವೆಂಬ ನುಡಿಯಂತೆ ಕೋಟಿ ವಿದ್ಯೆಗಳಲ್ಲಿ ಮೇಟಿ ವಿದ್ಯೆಯೆ ಮೇಲು ಎಂಬುದನ್ನು ಸರ್ವಜ್ಞನು ಬಲು ಮಾರ್ಮಿಕವಾಗಿ ಹೇಳಿದ್ದಾನೆ.

ಕೋಟಿ ವಿದ್ಯೆಗಳಲ್ಲಿ ಮೇಟಿವಿದ್ಯೆಯೆ ಮೇಲು ।
ಮೇಟಿಯಿಂ ರಾಟೆ ನಡೆದುದಲ್ಲದೆ ದೇಶ ।
ದಾಟವೆ ಕೆಡಗು ಸರ್ವಜ್ಞ ॥

(ಸಶೇಷ)

ಕಾರ್ಯನಿರತ ಮಹಿಳೆಯರಿಗೆ ಹೊಸ್ಟೆಲ್

ಮಂಗಳೂರು ನಗರದಲ್ಲಿ ಕಾರ್ಯನಿರತ ಮಹಿಳೆಯರಿಗಾಗಿ ಹೊಸ್ಟೆಲ್ ಒಂದನ್ನು ಬೇಗನೇ ಪ್ರಾರಂಭಿಸುವ ಸಂಭವವಿದ್ದು, ಅದಕ್ಕೆ ಕೇಂದ್ರ ಸರಕಾರ ಬೇಗನೆ ಮಂಜೂರಾತಿ ನೀಡುವ ನಿರೀಕ್ಷೆಯಿದೆಯೆಂದು ಕರ್ನಾಟಕ ಸರಕಾರದ ಮಹಿಳಾ ಮತ್ತು ಶಿಶುಕಲ್ಯಾಣ ಸಚಿವೆ ಶ್ರೀಮತಿ ಮನೋರಮಾ ಮಧ್ವರಾಜ್ ಅವರು ತಾ. 10ರಂದು ನೆಹರೂ ಮೈದಾನಿನಲ್ಲಿ ದ. ಕ. ಜಿಲ್ಲಾ ಕೊಂಗ್ರೆಸ್ ಸಮಿತಿ ಆಶ್ರಯದಲ್ಲಿ ಜರಗಿದ ಸಾರ್ವಜನಿಕ ಸಭೆಯಲ್ಲಿ ಭಾಷಣ ಮಾಡುತ್ತಾ ತಿಳಿಸಿದರು.

ಕರಾವಳಿವಲಯ ವಾಲಿಬೊಲ್ ಪ್ರಶಸ್ತಿ

ಪ್ರೊ| ಎಂ. ಜಿ. ಎಸ್. ಸ್ಮಾರಕ ಕರಾವಳಿ ವಲಯ ಅಂತರ್ ಕೊಲೇಜ್ ವಾಲಿಬಾಲ್ ಚಾಂಪಿಯನ್ ಶಿಪ್ ಫೈನಲಿನಲ್ಲಿ ಮಂಗಳೂರು ಸೈಂಟ್ ಎಲೋಸಿಯಸ್ ಕೊಲೇಜ್'ದವರು ಮೂಡಬಿದ್ರೆ ಶ್ರೀ ಮಹಾವೀರ ಕೊಲೇಜನ್ನು ಸೋಲಿಸಿ ಪ್ರಶಸ್ತಿಗಳಿಸಿದರು.

ಶ್ರೀಮದ್ಭಗವದ್ಗೀತೆ

(ಕಳೆದ ಸಂಚಿಕೆಯಿಂದ ಮುಂದುವರಿದುದು)

(ಮೂಲ ಸಂಸ್ಕೃತದಲ್ಲಿ ಮತ್ತು ತುಳುಭಾಷೆಯಲ್ಲಿ)

(ತುಳುಗೀತೆ ರಚಯಿತರು: ದಿ| ಮೂಲ್ಕಿ ನರಸಿಂಗರಾವ್, ಬಿ. ಎ., ಎಮ್. ಎಲ್.)

ಹದಿನಾರನೆಯ ಅಧ್ಯಾಯ—ದೈವಾಸುರ ಸಂಪದ್ವಿಭಾಗಯೋಗ

ಸಂಸ್ಕೃತ

ಚಿಂತಾಮಪರಿಮೇಯಾಂ ಚ ಪ್ರಲಯಾಂತಾಮುಪಾಶ್ರಿತಾಃ ।
ಕಾಮೋಪಭೋಗಪರಮಾ ಏತಾವದಿತಿ ನಿಶ್ಚಿತಾಃ ॥ ೧೧ ॥

ಆಶಾಪಾಶಶತೈರ್ಬದ್ಧಾಃ ಕಾಮಕ್ರೋಧಪರಾಯಣಾಃ ।
ಈಹಂತೇ ಕಾಮಭೋಗಾರ್ಥಮನ್ಯಾಯೇನಾರ್ಥಸಂಚಯಾನ್ ॥ ೧೨ ॥

ಇದಮದ್ಯ ಮಯಾಲಬ್ಧ ಮಿಮಂ ಪ್ರಾಪ್ಸ್ಯೇ ಮನೋರಥಂ ।
ಇದಮಸ್ತೀದಮಪಿ ಮೇ ಭವಿಷ್ಯತಿ ಪುನರ್ಧನಂ ॥ ೧೩ ॥

ಅಸೌ ಮಯಾ ಹತಃ ಶತ್ರುರ್ಹನಿಷ್ಯೇ ಚಾಪರಾನಪಿ ।
ಈಶ್ವರೋಽಹಮಹಂ ಭೋಗೀ ಸಿದ್ಧೋಽಹಂ ಬಲವಾನ್ಸುಖೀ ॥ ೧೪ ॥

ಆಢ್ಯೋಽಭಿಜನವಾನಸ್ಮಿ ಕೋಽನ್ಯೋಽಸ್ತಿ ಸದೃಶೋ ಮಯಾ ।
ಯಕ್ಷ್ಯೇ ದಾಸ್ಯಾಮಿ ಮೋದಿಷ್ಯ ಇತ್ಯಜ್ಞಾನವಿಮೋಹಿತಾಃ ॥ ೧೫ ॥

ಪದಿನಾಜನೆ ಅಧ್ಯಾಯ—ದೇವಾಸುರ ಸಂಪದ್ವಿಭಾಗ ಯೋಗೊ

ತುಳು

ಮಳ್ತ್ ವ್ಯತ್ಯಯ ಪರಿತ ಪರಿಮಿತ ಯೋಚನೆನ್, ಆಕಾಮತಾ ।
ಭೋಗೋಳನುಭವ ಮಳ್ತ್, ಉಂದೇ ಮಾತ ಅಂದ್‌ತ್ ನಿಶ್ಚಿತಾ ॥ ೧೧ ॥

ಬದ್ಧ ಆಶಾಪಾಶ ನೂದೆಟ್, ಕಾಮಕ್ರೋಧ ಪರಾಯಣೆರ್ ।
ಕಾಮ ಭೋಗೋದ್ದಿಶ್ಯ ಅನ್ಯಾಯಟ್ ಧನಾರ್ಜನೆ ಮಳ್ಪುವೆರ್ ॥ ೧೨ ॥

'ಉಂದು ತಿಕ್‌ಂಡೆಂಕ್ ಇನಿ, ನನ ಅವು ಎನ್ನ ಮನೋರಥಾ ।
ಇತ್ತ್ ಇತ್ತಿನವೆನ್ನವೇ, ನನ ಉಪ್ಪು ಅವ್ವೆನೆ ಸಂತತಾ ॥ ೧೩ ॥

ಶತ್ರುನುಂಬ್ಯನ್ ಕೆಯ್ರ್, ನನಲಾ ಯಾನ್ ಬೇತೆರೆ ಕೆರ್ವನೇ ।
ಯಾನೆ ಈಶ್ವರೆ, ಯಾನೆ ಭೋಗೀ, ಸಿದ್ಧೆ, ಸುಖಿಲ, ಬಲಿಷ್ಠನೇ ॥ ೧೪ ॥

ಆಢ್ಯೆ ಕುಲವಂತೆಲಾ ಯಾನೇರೆನ್ನ ಎದ್ರ್‌ಟ್ ಉಂತುವೇ? ।
ಯಜ್ಞ ಮಳ್ಪೇ, ದಾನ ಮಳ್ಪೇ, ಯಾನ್ ಸಂತೊಸಟುಪ್ಪುವೇ ॥ ೧೫ ॥

(ಮುಂದುವರಿಯುವುದು)

ವಾರದ ಭವಿಷ್ಯ

(ಎಸ್. ಸುಬ್ರಾಯನ್)

ತಾ. 15-12-74ರಿಂದ 21-12-1974ರ ವರೆಗೆ

ಮೇಷ:

ನೀವು ಒಳ್ಳೆಯ ಚಿಂತನೆಗೊಂಡು ಅಭ್ಯುದಯಕ್ಕಿರುವ ವ್ಯವಸಾಯಗೊಂಡವರಾಗುವಿರಿ. ಆತ್ಮೀಯ ಬಂಧುಜನರ ವಿಯೋಗವಿರುತ್ತದೆ. ಜೀವನದಲ್ಲಿ ಅಭಿವೃದ್ಧಿಗಿರುವ ವ್ಯವಸಾಯಗಳು ನಡೆಯುಲಿರುತ್ತವೆ. ರಿಕಾರ್ಡು ವ್ಯವಹಾರಗಳು ಮುಂದುವರಿಯುತ್ತವೆ. ವ್ಯಾಪಾರಿಗಳಿಗೆ ಈ ವಾರ ಪ್ರಗತಿಕರವಾಗಿ ಕಂಡುಬರಲಿರುತ್ತದೆ.

ವೃಷಭ:

ಎಲ್ಲ ಕೆಲಸಗಳೂ ಸಾವಕಾಶಗೊಳ್ಳಲಿರುತ್ತವೆ. ಸಂಪತ್ತಿನ ಸಂಗ್ರಹಣಾಸಕ್ತಿಯಿಂದ ಕೂಡಿದವರಾಗಿ ಕಾಣಬರುವಿರಿ. ಹಿರಿಯರ ಅಗಲಿಕೆಗಿರುವ ಸಂಘಟನೆ ಕಂಡುಬರುವುದು. ದೂರಗತ ಬಂಧುಜನರ ಭೇಟಿಯಾಗಲಿರುವುದು. ವ್ಯಾಪಾರಿಗಳಿಗೆ ಈ ವಾರ ಹೊಸತು ನೆಲೆಯನ್ನು ಕೊಡುವುದಾಗಿರುತ್ತದೆ.

ಮಿಥುನ:

ಸಾಮಾಜಿಕ ವಿಷಯಗಳ ಕಡೆಗೆ ಆಸಕ್ತಿಯನ್ನು ಹೊಂದಿದವರಾಗಿ ಕಾಣಬರುವಿರಿ. ಧಾರ್ಮಿಕ ವಿಷಯಾಸಕ್ತಿಯು ಕಂಡುಬರುವುದಾಗಿದೆ. ರಿಕಾರ್ಡುವ್ಯವಸಾಯಗಳು ಅಪೂರ್ಣಗಳಾಗಿ ಕಂಡುಬರುವುದು. ನೌಕರರು ಸ್ಥಾನಾಂತರಾಸಕ್ತರಾಗಲಿರುವರು. ವಿದ್ಯಾಜೀವನದವರು ಅಭಿವೃದ್ಧಿಗೊಳ್ಳುವರು.

ಕರ್ಕಟಕ:

ನಿಮ್ಮ ಮನಸ್ಸು ಕಲುಷಿತವಾಗಿರುವುದು. ಇದರಿಂದ ನಿಮ್ಮ ವ್ಯವಹಾರಗಳು ಐಕ್ಯತೆಯ ವಾತಾವರಣಕ್ಕೆ ಅನುಕೂಲವಾಗಿರುವುದಿಲ್ಲ. ರಿಕಾರ್ಡು ವ್ಯವಹಾರಗಳು ಮುಂದುವರಿಯುವವು. ನೌಕರರು ಸ್ಥಾನಾಂತರವನ್ನು ಹೊಂದಲಿರುವ ಸಂಪರ್ಕ ಕಾಣಬರುವುದು.

ಸಿಂಹ:

ಸಾಮಾಜಿಕದಲ್ಲಿ ಗೌರವವನ್ನು ಹೊಂದಲಿರುವಿರಿ. ಕುಟುಂಬದಲ್ಲಿ ನವೀನತೆಯ ವಾತಾವರಣ ಕಂಡುಬರುವುದಾಗಿದೆ. ವಾಸಸ್ಥಾನದ ಬದಲಾವಣೆಗಿರುವ ಯೋಜನೆಯನ್ನು ಹೊಂದಿದವರಾಗುವಿರಿ. ರಿಕಾರ್ಡು ವ್ಯವಹಾರಗಳಲ್ಲಿ ಜಯಲಾಭವಾಗಲಿರುತ್ತದೆ.

ಕನ್ಯಾ:

ಹಲವಾರು ವಿಚಾರಕಲ್ಪನೆಗಳಿಂದ ಕೂಡಿದವರಾಗಿ ಕಾಣಬರುವಿರಿ. ಧಾರ್ಮಿಕ ವಿಷಯಗಳಲ್ಲಿ ಆಸಕ್ತಿ ಇರುತ್ತದೆ. ಪತ್ರವ್ಯವಹಾರಗಳನ್ನು ಮಾಡುವಾಗ ಜಾಗರೂಕತೆಯಿಂದ ಕೂಡಿದವರಾಗಬೇಕು. ನೌಕರರು ಅಭಿವೃದ್ಧಿಗೊಳ್ಳುವ ಅವಸರಯುಕ್ತರಾಗಲಿರುವರು.

ತುಲಾ:

ಪ್ರವಾಸ ನವೀನ ಚಾರ ಸಂಘಟನೆ ಆಕಸ್ಮಿಕ ಬದಲಾವಣೆಗಳನ್ನು ಹೊಂದಿದವರಾಗಿ ಕಂಡುಬರುವಿರಿ. ದೇಹಾರೋಗ್ಯದ ನೆಲೆಯು ಉತ್ತಮವಾಗಿರುವುದಿಲ್ಲ. ಬಂಧುಜನರ ಅಗಲಿಕೆಗಿರುವ ಸಂಪರ್ಕವು ಕಂಡುಬರುವುದಾಗಿದೆ. ವಿದ್ಯಾಜೀವನದವರಿಗೆ ಪ್ರಗತಿಯಾಗಲಿದೆ.

ವೃಶ್ಚಿಕ:

ಭಿನ್ನ ಭಿನ್ನ ವಿಚಾರಕಲ್ಪನೆಗಳಿಂದ ನೆಲಸಿದವರಾಗಿರುವಿರಿ. ಕುಟುಂಬದಲ್ಲಿ ಅಭಿವೃದ್ಧಿಗಿರುವ ಯೋಜನೆಗಳಿರುತ್ತವೆ. ದೇಹಾರೋಗ್ಯದ ನೆಲೆ ಚೆನ್ನಾಗಿರುವುದಿಲ್ಲ. ಪತ್ರವ್ಯವಹಾರಗಳು ಇರುತ್ತವೆ. ಪ್ರವಾಸವನ್ನು ಮಾಡಲಿರುವ ಸಂಪರ್ಕ ಕಾಣುವುದು.

ಧನು:

ನಿಮ್ಮ ಜೀವನದಲ್ಲಿ ನವೀನತೆಗಿರುವ ವ್ಯವಹಾರ ಸಂಪರ್ಕಗಳಾಗುತ್ತವೆ. ಕುಟುಂಬದಲ್ಲಿ ಮಹತ್ವದ ಘಟನೆಗಳು ಸಂಭವಿಸುತ್ತವೆ. ಸಂಪತ್ತಿನ ಪ್ರಗತಿಗಿರುವ ಸಂಪರ್ಕವು ಇರುತ್ತದೆ. ದೂರಗತರ ಬಂಧುಜನರ ಸುಖವಾರ್ತೆಯನ್ನು ಹೊಂದಲಿರುವಿರಿ. ನೌಕರರಿಗೆ ಸ್ಥಾನಾಂತರಾವಕಾಶವಿರುತ್ತದೆ.

ಮಕರ:

ಬೇರೆ ಬೇರೆ ಕೆಲಸಗಳಿಂದ ಕೂಡಿದವರಾಗಿದ್ದು ಸಮಯಾವಕಾಶ ಕಡಮೆಯಾಗಿರುತ್ತದೆ. ಬಂಧುಜನರ ಭೇಟಿ ಸಹಾಯ ಸಿದ್ಧಿಗಳಿರುತ್ತವೆ. ಕೋರ್ಟುವ್ಯವಹಾರಗಳು ಮುಂದುವರಿಯುತ್ತವೆ ಶುಭಕೆಲಸಗಳಿಗೆ ಕೈಯನ್ನು ನೀಡಿದವರಾಗಿ ಕಾಣಬರುವಿರಿ. ಪ್ರವಾಸಕ್ಕಿರುವ ಸಂಪರ್ಕವಿದೆ.

ಕುಂಭ:

ಸಾಮಾಜಿಕ ವಿಷಯಗಳಲ್ಲಿ ಆಸಕ್ತಿಯನ್ನು ಹೊಂದಿದವರಾಗಿ ಕಾಣಬರುವಿರಿ. ಕೆಲಸಗಳು ಬಹುವಾಗಿದ್ದು ವಿರಾಮ ಕಡಮೆಯಾಗಿರುತ್ತದೆ. ಆಕಸ್ಮಿಕ ಘಟನೆಯಿಂದ ಕೂಡಿದವರಾಗಿ ಕಾಣಬರುವಿರಿ. ಪ್ರವಾಸವಿರುತ್ತದೆ.

ಮೀನ:

ಹಲವಾರು ಕೆಲಸಗಳ ತಾಕಲಾಟಗಳಿಂದ ಕೂಡಿರುವಿರಿ. ಸಂಪತ್ತಿನ ಪ್ರಗತಿಯನ್ನು ಹೊಂದಲಿರುವಿರಿ. ರಿಕಾರ್ಡು ವ್ಯವಹಾರಗಳಲ್ಲಿ ಜಯವನ್ನು ಹೊಂದಲಿರುವಿರಿ. ವ್ಯಾಪಾರಿಗಳಿಗೆ ಈ ವಾರ ಉನ್ನತಿಯನ್ನು ಕೊಡುವುದಾಗಿ ಕಾಣಬರುವುದು.

——

ದಂಪತಿಗಳ ಆತ್ಮಹತ್ಯೆ

ಬೆಂಗಳೂರಿನಿಂದ ನಗರಕ್ಕೆ ಆಗಮಿಸಿದ ಬ್ಯಾಂಕೊಂದರ ಅಧಿಕಾರಿ ವೆಂಕಟ್ರಾಮನ್ (ಪ್ರಾಯ 30) ಮತ್ತು ಅದೇ ಬ್ಯಾಂಕಿನಲ್ಲಿ ನೌಕರಳಾಗಿದ್ದ ಅವರ ಪತ್ನಿ ಜಾನಕಿ ಎಂಬವರು ಮಂಗಳೂರಿನ ಹೊಟೇಲೊಂದರಲ್ಲಿ ಟಿಕ್-20 ಸೇವಿಸಿ ಆತ್ಮಹತ್ಯೆ ಕೈಕೊಂಡ ಪ್ರಕರಣವೊಂದು ವಾರದ ಆರಂಭದಲ್ಲಿ ಬೆಳಕಿಗೆ ಬಂದಿತು. ಪತ್ನಿಯು ಹೊಟೇಲಿನ ಕೋಣೆಯಲ್ಲೇ ಮರಣಗೊಂಡಿದ್ದು, ಪ್ರಜ್ಞಾಹೀನ ಸ್ಥಿತಿಯಲ್ಲಿದ್ದ ಪತಿಯನ್ನು ಸರಕಾರೀ ಆಸ್ಪತ್ರೆಗೆ ದಾಖಲು ಪಡಿಸಿ ಚಿಕಿತ್ಸೆನಡೆಸಿದರೂ ಫಲಕಾರಿಯಾಗದೆ ಅವರು ಆಸ್ಪತ್ರೆಯಲ್ಲಿ ಅಸುನೀಗಿದರು.

ಭಾರತೀಯ ವಿದ್ಯಾಭವನ ಮಂಗಳೂರು ಕೇಂದ್ರ

ಇದರ ಆಶ್ರಯದಲ್ಲಿ ತಾ. 12ರಂದು ಪ್ರೊ। ದೇ. ಜವರೇಗೌಡರ ಎಂ. ಎ. ಉಪ ಕುಲಪತಿ, ಮೈಸೂರು ವಿಶ್ವವಿದ್ಯಾನಿಲಯ ಅವರ ಅಧ್ಯಕ್ಷತೆಯಲ್ಲಿ ಸುರತ್ಕಲ್ ಗೋವಿಂದದಾಸ ಕೊಲೇಜಿನ ಕನ್ನಡ ವಿಭಾಗದ ಮುಖ್ಯಸ್ಥ ಡಾ। ಎಚ್. ಸೀತಾರಾಮಾಚಾರ್ಯರು 'ಕುಮಾರ ವಾಲ್ಮೀಕಿಯ ರಾಮಾಯಣ' ಎಂಬ ವಿಷಯದ ಕುರಿತು ಭಾಷಣ ಮಾಡಿದರು. ಮಂಗಳೂರು ಗಣಪತಿ ಜೂನಿಯರ್ ಕೊಲೆಜಿನ ಅಧ್ಯಾಪಿಕೆ ಕುಮಾರಿ ಕೆ. ಚಂದ್ರಕಲಾ ಎಂ. ಎ. ಅವರು ಕುಮಾರ ವಾಲ್ಮೀಕಿಯ ರಾಮಾಯಣದಿಂದ ಕಾವ್ಯವಾಚನ ಮಾಡಿದರು.

ತಾ. 14ರಂದು ಸಂಜೆ ಭಾರತ ಯೋಗದ ಸತ್ಸಂಗ ಸೊಸೈಟಿಯ ಶ್ರೀ ಸ್ವಾಮಿ ಭವಾನಂದಗಿರಿ ಅವರು 'ಪರಮಹಂಸ ಯೋಗಾನಂದರ ಸಂದೇಶ' ಎಂಬ ವಿಷಯದ ಕುರಿತು ಮಾತನಾಡಿದ್ದರು. ಡಾ। ಎಂ. ಪಿ. ಪೈಯವರು ಅಧ್ಯಕ್ಷತೆ ವಹಿಸಿದ್ದರು.

ಉಪಸಮಿತಿ ಸದಸ್ಯತನ

ಕರ್ನಾಟಕ ಪ್ರದೇಶ ಕೊಂಗ್ರೆಸ್ ಸಮಿತಿಯ ಪಾರ್ಲಿಮೆಂಟರಿ ಉಪಸಮಿತಿಯ ಸದಸ್ಯರನ್ನಾಗಿ ದ. ಕ. ಜಿಲ್ಲೆಯ ಶ್ರೀಮತಿ ಎಡ್ಡಿ ಸಲ್ಡಾನಾ ಎಂ. ಎಲ್. ಸಿ. ಅವರನ್ನು ನೇಮಿಸಲಾಗಿದೆ.

——

"ಜನ್‌ತಾತಾ" ಸಾಬೂನು ಮಾರುಕಟ್ಟೆಗೆ

ಟಾಟಾ ಆಯಿಲ್ ಮಿಲ್ಸ್ ಕಂಪೆನಿಯವರು ತಯಾರಿಸಿರುವ ಜನತಾ ಸಾಬೂನು "ಜನ್‌ತಾತಾ" ಮಂಗಳೂರು ಮಾರುಕಟ್ಟೆಯಲ್ಲಿ ಮಾರಾಟಕ್ಕಾಗಿ ಬಿಡುಗಡೆಗೊಂಡಿದೆ. 100ಗ್ರಾಮ್ಸ್ ಭಾರದ ಈ ಸ್ನಾನದ ಸಾಬೂನಿಗೆ 95ಪೈಸೆ ಮತ್ತು ಸ್ಥಳೀಯ ತೆರಿಗೆಗಳು ಸೇ. ರೂ. 1-03 ಬೆಲೆ ನಿಗದಿ ಮಾಡಲಾಗಿದೆ.

——

ಸಾರ್ವಜನಿಕ ಸಭೆಯಲ್ಲಿ ಮುಖ್ಯಮಂತ್ರಿ ಅರಸ್

"ದೇಶವಿಂದು ಪ್ರಗತಿ ಪಥದಲ್ಲಿ ಮುಂದುವರಿಯಬೇಕಾಗಿದೆ. ಈ ನಿಟ್ಟಿನಲ್ಲಿ ಸಂಸದೀಯ ಪ್ರಜಾಸತ್ತೆಯ ನೀತಿಯನ್ನು ಅನುಸರಿಸುತ್ತಿರುವ ಬ್ರಹತ್‌ರಾಷ್ಟ್ರವಾದ ನಮ್ಮಲ್ಲಿ ಸಂಸದೀಯ ಪ್ರಜಾಸತ್ತೆಯನ್ನು ಉಳಿಸಿಕೊಳ್ಳಲೇ ಬೇಕಾಗಿದೆ" ಎಂಬುದಾಗಿ ಕರ್ನಾಟಕ ಸಚಿವ ಸಂಪುಟ ಪುನರ್ರಚನೆಯಾದ ಮೇಲೆ ಪ್ರಥಮ ಬಾರಿ ಮಂಗಳೂರಿಗೆ ಆಗಮಿಸಿದ ಮುಖ್ಯಮಂತ್ರಿ ಶ್ರೀ| ದೇವರಾಜ್ ಅರಸ್ ಅವರು ಮಂಗಳೂರು ನೆಹರೂ ಮೈದಾನಿನಲ್ಲಿ, ತಾ. 10ರಂದು ಸಾಯಂಕಾಲ ನೆರೆದ ಬೃಹತ್ ಸಾರ್ವಜನಿಕ ಸಭೆಯನ್ನುದ್ದೇಶಿಸಿ ಭಾಷಣಮಾಡುವಾಗ ಹೇಳಿದರು. ತನ್ನ ಸರಕಾರ ಸಾಧಿಸಿದ ಜನಹಿತ ಸಾಧನೆಗಳನ್ನೂ ಅವರು ಉಲ್ಲೇಖಿಸಿದರು. ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಶ್ರೀ| ಕೆ. ಕೆ. ಶೆಟ್ಟಿ ಎಂ. ಪಿ; ಅವರು ಅಧ್ಯಕ್ಷತೆ ವಹಿಸಿದ್ದ ಈ ಸಭೆಯಲ್ಲಿ ಸಚಿವರುಗಳಾದ ಶ್ರೀ| ವೀರಪ್ಪ ಮೊಯ್ಲಿ, ಶ್ರೀಮತಿ ಮನೋರಮಾ ಮಧ್ವರಾಜ್ ಮತ್ತು ಶ್ರೀ| ಸುಬ್ಬಯ್ಯ ಶೆಟ್ಟಿ ಅವರೂ ಭಾಷಣ ಮಾಡಿದರು.

——

ಸಂಗೀತಾರಾಧನಾ ಸುವರ್ಣ ಮಹೋತ್ಸವ

ಹಿಂದೂಸ್ಥಾನಿ ಸಂಗೀತ ಶಿಕ್ಷಕ ಶ್ರೀ| ಎಂ. ನಾರಾಯಣ ಪೈಯವರ ಸತತ 50 ವರ್ಷಕ್ಕೆ ಮೇಲ್ಪಟ್ಟ ಸಂಗೀತ ಸೇವೆಯ ಸ್ಮರಣಾರ್ಥ ಅವರ ಶಿಷ್ಯವೃಂದದವರು ಸಂಗೀತಾರಾಧನಾ ಸುವರ್ಣಮಹೋತ್ಸವದ ಕಾರ್ಯಕ್ರಮವೊಂದನ್ನು ಇದೇ ತಿಂಗಳ ತಾ. 22ರಂದು ಪುರಭವನದಲ್ಲಿ ವ್ಯವಸ್ಥೆಗೊಳಿಸಿದ್ದಾರೆ. ಕಸ್ತೂರ ಬಾ ಮೆಡಿಕಲ್ ಕಾಲೇಜಿನ ಪ್ರಿನ್ಸಿಪಾಲ್ ಡಾ| ಎಂ. ಪಿ. ಪೈಯವರ ಅಧ್ಯಕ್ಷತೆಯಲ್ಲಿ ನಡೆಯುವ ಈ ಮಹೋತ್ಸವದಲ್ಲಿ ಶ್ರೀ| ನಾರಾಯಣ ಪೈಯವರನ್ನು ಸನ್ಮಾನಿಸಲಾಗುವುದು. ನಾರಾಯಣ ಪೈಯವರ ಶಿಷ್ಯವೃಂದದವರಿಂದ ಸಂಗೀತಾರಾಧನಾ ಕಾರ್ಯಕ್ರಮವೂ ಇದೆ.

ಸ್ಟೆಂಡಿಂಗ್ ಕಮಿಟಿಗೆ ಹೊಸ ಅಧ್ಯಕ್ಷರು

ಮಂಗಳೂರು ನಗರಸಭೆಯ ಸ್ಟೆಂಡಿಂಗ್ ಕಮಿಟಿಗೆ ನಗರಸಭಾಸದಸ್ಯ ಶ್ರೀ| ರಿಚಾರ್ಡ್ ಡಿ'ಕೊಸ್ತಾ ಹೊಸ ಅಧ್ಯಕ್ಷರಾಗಿ ಆಯ್ಕೆಗೊಂಡಿರುವರು.

ಸ್ತ್ರೀರೋಗ ತಜ್ಞರ ಸಮ್ಮೇಳನ

ಅಖಿಲ ಭಾರತ ಪ್ರಸವ ಶಾಸ್ತ್ರಜ್ಞರ ಮತ್ತು ಸ್ತ್ರೀರೋಗ ತಜ್ಞರ ಸಮ್ಮೇಳನವೊಂದು ತಾ. 14ರಂದು ಮಣಿಪಾಲದಲ್ಲಿ ಆರಂಭವಾಗಿದ್ದು ನಾಳೆ (ತಾ. 16)ಯ ತನಕ ನಡೆಯುವುದು. ಕುಟುಂಬ ಯೋಜನಾ ವಿಧಾನಗಳು ಮತ್ತು ಕುಟುಂಬ ಯೋಜನಾ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವಲ್ಲಿ ಇದಿರಾಗುವ ಆತಂಕಗಳನ್ನು ಪ್ರಧಾನವಾಗಿ ಚರ್ಚಿಸುವುದೇ ಈ ಸಮ್ಮೇಳನದ ಉದ್ದೇಶವಾಗಿರುತ್ತದೆ.

ಹಾಸನ - ಮಂಗಳೂರು ರೈಲ್ವೇ

ಹಾಸನ ಮಂಗಳೂರು ರೈಲು ರಚನೆಗಾಗಿ ಮಂಜೂರು ಮಾಡಲಾಗುವ ನಿಧಿಯಲ್ಲಿ ಯೋಜನಾ ಆಯೋಗವು ಕಡಿತ ಮಾಡಿರುವುದರಿಂದಾಗಿ, ಮುಂದಿನ ಎರಡು ಆರ್ಥಿಕ ವರ್ಷಗಳಲ್ಲಿ ತಲಾ 4ಕೋಟಿ ರೂಪಾಯಿಗಳಷ್ಟು ಹಣ ಲಭಿಸದಿದ್ದಲ್ಲಿ, ಯೋಜನೆಯ ಕಾರ್ಯ ಇನ್ನೆರಡು ವರ್ಷಗಳ ವಿಳಂಬವಾಗುವುದೆಂದು ದಕ್ಷಿಣ ರೈಲು ವಲಯದ ಜನರಲ್ ಮೆನೇಜರ್ ಶ್ರೀ| ಜಿ. ಎಸ್. ಎ. ಸಲ್ಡಾನಾ ಅವರು ಕೆನರಾ ಚೇಂಬರ್ ಆಫ್ ಕಾಮರ್ಸ್ ಸಭೆಯಲ್ಲಿ ತಾ. 9ರಂದು ಭಾಗವಹಿಸಿಯಾದ ಮೇಲೆ ಪತ್ರಿಕಾ ಪ್ರತಿನಿಧಿಗಳು ಕೇಳಿದ ಪ್ರಶ್ನೆಗೆ ಉತ್ತರರೂಪವಾಗಿ ಹೇಳಿದರು. ಹಾಸನ-ಮಂಗಳೂರು ರೈಲ್ವೇಗಾಗಿ ಮಂಜೂರಾದ 40 ಕೋಟಿ ರೂಪಾಯಿಗಳಲ್ಲಿ 30 ಕೋಟಿಯಷ್ಟು ಹಣ ಈಗಾಗಲೇ ವಿನಿಯೋಗಿಸಲಾಗಿದೆಯೆಂದೂ ಅವರು ಹೇಳಿದರು. ಮಂಗಳೂರು ರೈಲುನಿಲ್ದಾಣವನ್ನು "ಫ್ರೀ ಬುಕ್ಕಿಂಗ್ ಸ್ಟೇಶನನ್ನಾಗಿ" ಅವರು ಚೇಂಬರ್‌ನಲ್ಲಿ ಘೋಷಿಸಿದರು.

ಜಿಲ್ಲಾ ಶಿಕ್ಷಣ ಸಮ್ಮೇಳನ

ಜಿಲ್ಲಾ ಶೈಕ್ಷಣಿಕ ಸಮ್ಮೇಳನವೊಂದು 1975ನೇ ಫೆಬ್ರವರಿ ತಾ. 2ರಂದು ಮಂಗಳೂರು ಪಿ. ವಿ. ಎಸ್. ಕಲಾಕುಂಜದಲ್ಲಿ ಜರಗಲಿದ್ದು, ಭಾರತೀಯ ವಿದ್ಯಾಭವನದ ಮಂಗಳೂರು ಕೇಂದ್ರದ ಅಧ್ಯಕ್ಷ ಶ್ರೀ| ಮಧುಸೂದನ ಡಿ.ಕುಶೆ ಅವರು ಅಧ್ಯಕ್ಷರಾಗುಳ್ಳ ಸ್ವಾಗತ ಸಮಿತಿಯೊಂದು ಆ ಬಗ್ಗೆ ರೂಪುಗೊಂಡಿದೆ.

"ಶ್ರೀ ಮೈಸೂರು ವಿಶ್ವವಿದ್ಯಾಲಯ ೧೯೭೪"

ಇತ್ತೀಚೆಗೆ ಮೈಸೂರಲ್ಲಿ ನಡೆದ ಮೈಸೂರು ವಿಶ್ವವಿದ್ಯಾಲಯದ ಭಾರ ಎತ್ತುವಿಕೆ ಮತ್ತು ಉತ್ತಮ ದೇಹದಾರ್ಢ್ಯ ಸ್ಪರ್ಧೆಯಲ್ಲಿ ಮಂಗಳೂರು ಕಸ್ತೂರ ಬಾ ಮೆಡಿಕಲ್ ಕಾಲೇಜಿನ ಶ್ರೀ| ಕೆ. ರವೀಂದ್ರ ರೈಯವರು "ಶ್ರೀ| ಮೈಸೂರು ವಿಶ್ವದ್ಯಾಲಯ 1974" ಬಿರುದು ಪಡೆದಿರುವರು.

ಉಡುಪಿಯಲ್ಲಿ ರಾಜ್ಯ ಲಾಟರಿ ಡ್ರಾ

ಕರ್ನಾಟಕ ರಾಜ್ಯ ಸರಕಾರದ ಲಾಟ್ರಿ ಕಾರ್ಯಕ್ರಮದ 66ನೇ ಡ್ರಾ ತಾ. 8ರಂದು ಅಪರಾಹ್ನ 4ಗಂಟೆಗೆ ಉಡುಪಿ ಲಾ ಕಾಲೇಜ್ ವಠಾರದಲ್ಲಿ ಜರಗಿತು. ಮಣಿಪಾಲ ಎಕಾಡಮಿ ಆಫ್ ಜನರಲ್ ಎಜ್ಯುಕೇಶನ್ ಇದರ ಅಧ್ಯಕ್ಷ ಡಾ| ಟಿ. ಎಮ್. ಎ. ಪೈಯವರು ಮುಖ್ಯಅತಿಥಿಯಾಗಿ ಪ್ರಥಮ ಮೂರು ಬಹುಮಾನಗಳ ಚೀಟುಗಳನ್ನೆತ್ತಿದರು.

ಲಕ್ಷದೀಪೋತ್ಸವ

ಶ್ರೀ ಕ್ಷೇತ್ರ ಧರ್ಮಸ್ಥಳದಲ್ಲಿ ಲಕ್ಷದೀಪೋತ್ಸವದ ಕಾರ್ಯಕ್ರಮಗಳು ತಾ. 9ರಿಂದ 14ರ ವರೆಗೆ ನಡೆದುವು. ತಾ.9ರಂದು ಹೊಸಕಟ್ಟೆ ಉತ್ಸವ, 10ರಂದು ಕೆರೆಕಟ್ಟೆ ಉತ್ಸವ, ತಾ. 11ರಂದು ಸಂಜೆ 3ಗಂಟೆಗೆ ಲಲಿತ ಕಲಾಗೋಷ್ಠಿಯು ವಿವಿಧ ವಾದ್ಯಕಛೇರಿಯೊಂದಿಗೆ ನಡೆದಾದ ಮೇಲೆ 5-30ಕ್ಕೆ ಸಮ್ಮೇಳನ, ಮಂಟಪದಲ್ಲಿ ಭರತ ನಾಟ್ಯ, ಯಕ್ಷಗಾನ ಬೊಂಬೆಯಾಟ, ವೀರ ಮಹಾವೀರ ನಾಟಕಗಳು ನಡೆದು ರಾತ್ರಿ ಉದ್ಯಾವನದ ಉತ್ಸವ ನಡೆದಿತ್ತು. ತಾ. 12ರಂದು ಸ್ವಸ್ತಿ ಶ್ರೀ ಶ್ರೀ ದೇವೇಂದ್ರ ಕೀರ್ತಿ ಭಟ್ಟಾರಕ ಪಟ್ಟಾಚಾರ್ಯ ವರ್ಯ ಸ್ವಾಮೀಜಿ, ಹೊಂಬುಜ ಅವರ ಅಧ್ಯಕ್ಷತೆಯಲ್ಲಿ ನಡೆದ ಸರ್ವಧರ್ಮ ಸಮ್ಮೇಳನವನ್ನು ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿ ಡಾ| ಎಚ್. ನರಸಿಂಹಯ್ಯ ಉದ್ಘಾಟಿಸಿದ್ದರು. ರಾತ್ರಿ ವಿದ್ವಾನ್ ಪಿ. ಭುವನೇಶ್ವರಯ್ಯನವರ ಪಿಟೀಲು ವಾದನ ಕಛೇರಿ ನಡೆದಾದ ಮೇಲೆ ಕಂಚಿಮಾರು ಕಟ್ಟೆ ಉತ್ಸವ ನಡೆದಿತ್ತು. ತಾ. 13ರಂದು ಸಾಯಂಕಾಲ ವರಕವಿ ಡಾ| ದ. ರಾ. ಬೇಂದ್ರೆಯವರ ಅಧ್ಯಕ್ಷತೆಯಲ್ಲಿ ನಡೆದ ಸಾಹಿತ್ಯ ಸಮ್ಮೇಳನವನ್ನು ಕರ್ನಾಟಕ ವಿಶ್ವವಿದ್ಯಾನಿಲಯದ ಕುಲಪತಿ ಡಾ| ಆರ್. ಸಿ. ಹಿರೇಮಠ ಅವರು ಉದ್ಘಾಟಿಸಿದ್ದರು. ರಾತ್ರಿ ಮದುರೈ ಎಸ್. ಸೋಮಸುಂದರಂ ಅವರ ಸಂಗೀತ ಕಛೇರಿ ನಡೆದು ಗೌರಿ ಮಾರುಕಟ್ಟೆ ಉತ್ಸವ ನಡೆದಿತ್ತು. ತಾ. 14ರಂದು ರಾತ್ರಿ ಭಗವಾನ್ ಶ್ರೀ ಚಂದ್ರನಾಥ ಸ್ವಾಮಿಯ ಸಮವ ಸರಣಪೂಜೆ ನಡೆದಾದ ಮೇಲೆ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಯಕ್ಷಗಾನಮಂಡಳಿಯಿಂದ ಸೇವೆಯಾಟ ನಡೆದಿತ್ತು.

ಮಂಗಳೂರು ಬಂದರು ಉದ್ಘಾಟನೆ

ಬರುವ 1975ನೇ ಜನವರಿ ತಾ. 11ರಂದು ಭಾರತ ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿಯವರು ಮಂಗಳೂರು ನವಬಂದರದ ಔಪಚಾರಿಕ ಉದ್ಘಾಟನೆ ನಡೆಸಲಿದ್ದಾರೆ. ಅಂದು ಅಪರಾಹ್ನ 2-05ಕ್ಕೆ ಶ್ರೀಮತಿ ಗಾಂಧಿಯವರು ವಿಮಾನ ಮೂಲಕ ಮಂಗಳೂರಿಗೆ ಆಗಮಿಸಿ ಬಂದರದ ಉದ್ಘಾಟನೆಯನ್ನು ನೆರವೇರಿಸಿ ಸಾಯಂ. 4-45ಕ್ಕೆ ತಿರುವನಂತಪುರಕ್ಕೆ ಪ್ರಯಾಣಿಸುವರೆಂದು ಬಂದರು ಯೋಜನೆಯ ಮುಖ್ಯಾಧಿಕಾರಿಗಳಿಗೆ ಬಂದ ಪ್ರಧಾನಿಯವರ ಕಾರ್ಯಕ್ರಮದಲ್ಲಿ ಸೂಚಿಸಲಾಗಿದೆ.

——

PRABHAT, KANNADA WEEKLY, MANGALORE-575001
REGD. No. KRNL-8.

To

Printed at the Prabhat Printers, Ltd., Mangalore. Edited and Published by K. V. Shenoy at Prabhat Office, Car Street, Mangalore-1.